ಆರ್.ಎ.29/2025
ಪಿ.ಡಬ್ಲ್ಯು 01

ದಿನಾಂಕ: 03-12-2025 ರಂದು ಸಾಕ್ಷಿದಾರರನ್ನು ಕರೆಯಿಸಿ ವಚನ ಬೋದಿಸಲಾಯಿತು.

**<u>ಪಾಟಿ ಸವಾಲುಃ ಎದುರುದಾರ ಪರ ಶ್ರೀ. ಕೆ ಬಿ ವಿ ವಕೀಲರಿಂದ</u>:-**

ಕೆಳನ್ಯಾಯಾಲಯದಲ್ಲಿ ತೀರ್ಪು ಆದ ಕೂಡಲೇ ವಕೀಲರು ನಮಗೆ ತಿಳಿಸಿದ್ದಾರೆ ಎಂದರೆ ಸುಳ್ಳು. ಮಸ್ಕಿ ನ್ಯಾಯಾಲಯದಲ್ಲಿ ಕೇಸ ಕ್ಯಾನ್ಸಲ್ ಆಗಿದ. ಕ್ಯಾನ್ಸಲ್ ಎಂದರೆ ಏನು ಎಂದು ನನಗೆ ಗೊತ್ತಿಲ್ಲಾ. ನಾನು ಈ ನ್ಯಾಯಾಲಯದಲ್ಲಿ ಏನು ಅರ್ಜಿ ಸಲ್ಲಿಸಿದ್ದೇನೆ ಗೊತ್ತಿಲ್ಲಾ. ನನಗೆ ಓದಲು ಬರೆಯಲು ಬರುವುದಿಲ್ಲಾ. ನನ್ನ ಸಾಕ್ಷಿ ಪ್ರಮಾಣ ಪತ್ರದ ಮುಖ್ಯ ವಿಚರಣೆಯಲ್ಲಿ ಏನು ಬರೆದಿದೆ ಗೊತ್ತಿಲ್ಲಾ ಅದಕ್ಕೆ ನಾನು ಮಾಹಿತಿ ಕೊಟ್ಟಿಲ್ಲಾ. ನಮ್ಮದು ಒಣಬೇಸಾಯ ಭೂಮಿ ಎಂದರೆ ಸರಿ. ಒಣಬೇಸಾಯದ ಭೂಮಿಯಲ್ಲಿ ಏಪ್ರೀಲ್ ಮತ್ತು ಮೇ ತಿಂಗಳು ಏನು ಕೆಲಸ ಇರುವುದಿಲ್ಲಾ ಎಂದರೆ ಸರಿ. ನಾನು 2019 ರಂದ ನ್ಯಾಯಾಲಯಕ್ಕೆ ಓಡಾಡಿದ್ದೇನೆ ಎಂದರೆ ಸರಿ. ನಮ್ಮ ಊರಲ್ಲಿ ಮತ್ತು ಅಕ್ಕ ಪಕ್ಕದ ಊರಲ್ಲಿ ಸಾಕಷ್ಟು ವಕೀಲರು ಇದ್ದಾರಾ ನನಗೆ ಗೊತ್ತಿಲ್ಲಾ. ನಮ್ಮ ಊರಿನಿಂದ 3-4 ಕೀ ಮೀಟರದಲ್ಲಿ ತುರುವಿಹಾಳ ಗ್ರಾಮ ಇದೆ ಎಂದರೆ ನಿಜ. ಅಲ್ಲಿ 10-12 ಜನ ವಕೀಲರು ಇದ್ದಾರೆ ಎಂದರೆ ಸರಿ. ನಾನು ಬೇಸಗೆ ರಜೆಯಲ್ಲಿ ಬೇರೆ ನ್ಯಾಯಾಲಯಗಳಲ್ಲಿ in-charge ನಲ್ಲಿ ನಮ್ಮ ಅರ್ಜಿಯನ್ನು ತೆಗೆದುಕೊಳ್ಳುತ್ತವೆ ಅಂತಾ ಹೇಳಿ ಬರೆಯಿಸಿಲ್ಲಾ. ಇಲ್ಲಿ ನಾನು ಮೇಲ್ಮನವಿ ಸಲ್ಲಿಸಲು 2 ತಿಂಗಳು 14 ದಿವಸ ತಡವಾಗಿದೆ. ನಾವು ಕೆಳನ್ಯಾಯಾಲಯದಲ್ಲಿ ಕೂಡಾ ಉದ್ದೇಶ ಪೂರ್ವಕವಾಗಿ ವಿಳಂಬ ಮಾಡಿದ್ದು ಈಗ ಮತ್ತೆ ಎದುರುದಾರರಿಗೆ ತೊಂದರೆ ಕೊಡಬೇಕು ಅಂತಾ ವಿಳಂಬ ಮಾಡಿ ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಗೊತ್ತಿಲ್ಲಾ. ನನಗೆ ಈ ವಿಷಯದ ಬಗ್ಗೆ ಮಾಹಿತಿ ಇಲ್ಲಾ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೇಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

Sd/-
**(ಉಂಡಿ ಮಂಜುಳಾ ಶಿವಪ್ಪ )**
ಹಿರಿಯ ಸಿವಿಲ್ ನ್ಯಾಯಾಧೀಶರು,
ಲಿಂಗಸೂಗುರು.